ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,
ಉಡುಪಿ ಜಿಲ್ಲೆ , ಉಡುಪಿ.

ಸೆಷನ್ಸ್ ಕೇಸ್ ನಂಃ **28/2024** ಪಿಡಬ್ಲ್ಯು-5

ಸಿಡಬ್ಲ್ಯು-12

| | | |
|---|---|---|
| ಸಾಕ್ಷಿದಾರರ ಹೆಸರು | - | ಉಮರ್ |
| ತಂದೆಯ ಹೆಸರು | - | ಅಬ್ದುಲ್ ಖಾದರ್ |
| ವಯಸ್ಸು | - | 53 ವರ್ಷ |
| ಉದ್ಯೋಗ | - | ಅಟೋ ಚಾಲಕ |
| ವಿಳಾಸ | - | ಕಾಪು ಮಜೂರು |

ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ

ಚಾಸಾ 13 ಮತ್ತು 14 ರವರ ಪರಿಚಯ ಇದೆ. ಮೃತ ಜ್ಯೋತಿ ಈಕೆಯ ಪರಿಚಯ ಇದೆ. ಆಕೆ ನೇಣು ಬಿಗಿದು ಆಕೆ ವಾಸಿಸುತ್ತಿದ್ದ ವಸತಿಗೃಹದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಸದ್ರಿ ಸ್ಥಳಕ್ಕೆ ನಾನು ಹೋಗಿದ್ದೆ. ದಿನಾಂಕ 30-03-2024 ರಂದು ಆಕೆಯ ಶವವನ್ನು ಕಾಪು ತಹಶೀಲ್ದಾರರು ಪರಿಶೀಲಿಸುವ ಸಮಯದಲ್ಲಿ ನಾನು ಹಾಜರಿದ್ದು ಶವವನ್ನು ಪರಿಶೀಲಿಸಿ ಮಹಜರು ಬರೆದಿರುತ್ತಾರೆ. ಹಾಗೂ ಶವ ಪಂಚನಾಮೆಯ ಕಾಲದಲ್ಲಿ ಒಂದು ಡೈರಿ ಬರೆದು ಇಟ್ಟಿದ್ದು ಸದ್ರಿ ಡೈರಿಯಲ್ಲಿ ತನ್ನ ಸಾವಿಗೆ ಆಕೆಯ ಗಂಡ ನೀಡುವ ಮಾನಸಿಕ ಕಿರುಕುಳವೇ ಕಾರಣ ಎಂದು ನಮೂದಿಸಿರುತ್ತಾಳೆ. ಆ ಸಮಯದಲ್ಲಿ ತಹಶೀಲ್ದಾರರು ಒಂದು ಪೆನ್ ಮತ್ತು ಮೊಬೈಲನ್ನು ಸಹಾ ಪರಿಶೀಲಿಸಿರುತ್ತಾರೆ. ಡೈರಿ, ಮೊಬೈಲ್ ಮತ್ತು ಪೆನ್ನನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡು ವಿವರವಾದ ಪಂಚನಾಮೆ ಬರೆದಿರುತ್ತಾರೆ. ಆಕೆಯ ಕುತ್ತಿಗೆಯ ಬಳಿ ಲಿಗೇಚರ್ ಮಾರ್ಕ್ ಇರುವುದು ಕಂಡುಬಂದಿರುತ್ತದೆ. ಮೃತ ದೇಹ ಮತ್ತು ಮರಣ ಪತ್ರವನ್ನು ಪರಿಶೀಲಿಸಿದಾಗ

ಆರೋಪಿಯ ಕಿರುಕುಳದಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬ ಅಭಿಪ್ರಾಯ ಬಂದಿರುತ್ತದೆ. ಈ ಬಗ್ಗೆ ತಯಾರಿಸಿದ ಶವ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದ್ರಿ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

2. ಡೈರಿ, ಪೆನ್ ಮತ್ತು ಮೊಬೈಲನ್ನು ನೋಡಿದಲ್ಲಿ ಗುರುತಿಸುತ್ತೇನೆ. ಡೈರಿಯನ್ನು ನಿಪಿ-2, ಪೆನ್ನನ್ನು ಎಂಓ-1 ಮತ್ತು ಮೊಬೈಲನ್ನು ಎಂಓ-3 ಎಂದು ಈಗಾಗಲೇ ಗುರುತಿಸಲಾಗಿದೆ. ಮಹಜರಿಗೆ ಸಹಕರಿಸಲು ಪೋಲಿಸರು ನೋಟೀಸ್ ಕೊಟ್ಟಿರುತ್ತಾರೆ. ನೋಟೀಸನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ದಿಃ 31-03-2024 ರಂದು ಪೋಲಿಸರು ಆರೋಪಿಯನ್ನು ರಾತ್ರಿ ವಶಕ್ಕೆ ಪಡೆದು ಠಾಣೆಗೆ ಕರೆ ತಂದು ದಸ್ತಗಿರಿ ಮಾಡಿದ್ದು, ಆ ಸಮಯದಲ್ಲಿ ನಾನು ಹಾಜರಿದ್ದು ಪೋಲಿಸರು ತಯಾರಿಸಿದ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಅದೇ ದಿನ ಮೃತಳು ಆತ್ಮಹತ್ಯೆ ಮಾಡಿಕೊಳ್ಳುವಾಗ ಉಪಯೋಗಿಸಿದ ಚೂಡಿದಾರದ ವೇಲನ್ನು ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿ ಪೋಲಿಸ್ ಸಿಬ್ಬಂದಿಗೆ ನೀಡಿದ್ದು, ಪೋಲಿಸ್ ಸಿಬ್ಬಂದಿಯವರು ಸದ್ರಿ ಚೂಡಿದಾರದ ವೇಲನ್ನು ತನಿಖಾಧಿಕಾರಿ ಸಮಕ್ಷಮ ಹಾಜರುಪಡಿಸಿದ ಸಮಯದಲ್ಲಿ ನಾನು ಹಾಜರಿದ್ದು ತನಿಖಾಧಿಕಾರಿ ತಯಾರಿಸಿದ ಮಹಜರಿಗೆ ಸಹಿ ಮಾಡಿರುತ್ತೇನೆ. ಸದ್ರಿ ಮಹಜರನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸದ್ರಿ ವೇಲನ್ನು ನೋಡಿದಲ್ಲಿ ಗುರುತಿಸುತ್ತೇನೆ. ತೆರೆದ ನ್ಯಾಯಾಲಯದಲ್ಲಿ ಸೀಲು ಮಾಡಿ ಪ್ಯಾಕ್ ಮಾಡಲಾಗಿದ್ದ ವಸ್ತುವನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ಧು, ವೇಲನ್ನು ಮುದ್ದೆಮಾಲು-3 ಎಂದು

ಗುರುತಿಸಲಾಯಿತು. ಮಹಜರು ಸಮಯದಲ್ಲಿ ಪೋಲಿಸರು ನೋಟೀಸ್ ಕೊಟ್ಟಿರುತ್ತಾರೆ. ನೋಟೀಸನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ಎ. ರವರಿಂದ

ಆ ದಿನ ಪೋಲಿಸರು ನನಗೆ ಬರಲು ಹೇಳಿದ್ದರು. ಪೋಲಿಸರು ನನಗೆ ನೋಟೀಸ್ ಕೊಟ್ಟಿಲ್ಲ. ನಾವು ಸ್ಥಳಕ್ಕೆ ಹೋದಾಗ ಮನೆಯ ಬಾಗಿಲು ತೆರೆದಿತ್ತು ಮತ್ತು ಪೋಲಿಸರು ಇದ್ದರು ಎಂದರೆ ಸರಿಯಲ್ಲ. ಸ್ಥಳಕ್ಕೆ ಮೊದಲು ತಹಶೀಲ್ದಾರ್ ರವರು ಬಂದಿರುತ್ತಾರೆ ನಂತರ ನಾವು ಹೋಗಿರುತ್ತೇವೆ. ನಾನು ಶವ ಪಂಚನಾಮೆಯ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಇದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಒಂದು ಬಾರಿ ದಿಃ30-03-2024 ರಂದು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಮತ್ತೆ ಪೋಲಿಸ್ ಠಾಣೆಗೆ ಹೋಗಿಲ್ಲ. ಠಾಣೆಯಲ್ಲಿ ಎಷ್ಟು ದಾಖಲೆಗಳಿಗೆ ಸಹಿ ಮಾಡಿದ್ದೇನೆ ನೆನಪಿಲ್ಲ. ನಾನು ಸಹಿ ಮಾಡಿರುವ ದಾಖಲೆಗಳನ್ನು ಖುದ್ದಾಗಿ ಓದಿ ನೋಡಿಲ್ಲ. ನಾನು ಪೋಲಿಸರ ಖಾಯಂ ಸಾಕ್ಷಿದಾರನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 10-15 ಪೋಲಿಸ್ ಪ್ರಕರಣಗಳಲ್ಲಿ ಸಾಕ್ಷಿದಾರ ನಾಗಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಆರೋಪಿಗೆ, ವಸ್ತು ಮತ್ತು ದಾಖಲೆಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.